ಸುದ್ದಿ ಸಿಂಚನ

ವಿಜೃಂಭಣೆಯ ವರ್ಧಂತಿ ಉತ್ಸವ

ಹೊನ್ನಾವರ: ತಾಲೂಕಿನ ಕುಳಕೋಡ ದೇವರಕಟ್ಟೆಯ ಶ್ರೀ ಮುದ್ರಿಯಲ್ಲಮ್ಮ ದೇವರ ನೂತನ ಶಿಲಾಬಿಂಬದ ಪ್ರತಿಷ್ಠಾ 19ನೇ ವರ್ಧಂತಿ ಉತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ಬೆಳಗ್ಗೆ ಗಣೇಶ ಪೂಜೆ, ಪುಣ್ಯಾಹ, ಬ್ರಹ್ಮ ಕೂರ್ಚ ಹವನ, ಶಕ್ತಿ ತತ್ವ ಕಲಾ ಹೋಮ, ಅಭಿಷೇಕ ಬಲಿ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ ನಡೆಯಿತು. ವಿವಿಧೆಡೆಯಿಂದ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಶ್ರೀ ಮುದ್ರಿಯಲ್ಲಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಮಧುಕರ ಮೇಸ್ತ, ಉಪಾಧ್ಯಕ್ಷ ದಾಮೋದರ ಮೇಸ್ತ, ಕಾರ್ಯದರ್ಶಿ ಮಹೇಶ ಮೇಸ್ತ, ಖಜಾಂಚಿ ಉಮೇಶ ಮೇಸ್ತ, ಸದಸ್ಯರಾದ ಶಂಕರ ಮೇಸ್ತ, ಅರುಣ ಮೇಸ್ತ, ಸೋಮಾ ಮೇಸ್ತ, ರುಕ್ಮಯ್ಯ ಮೇಸ್ತ, ಸತೀಶ ಮೇಸ್ತ, ಪಾಂಡುರಂಗ ಮೇಸ್ತ, ವೆಂಕಟ್ರಮಣ ಮೇಸ್ತ, ದೇವಿದಾಸ ಮೇಸ್ತ, ಅನಂತ ಮೇಸ್ತ ಇತರರಿದ್ದರು.

ಡಿಸಿ ಭರವಸೆ: ಪ್ರತಿಭಟನೆ ಹಿಂದಕ್ಕೆ

ಶಿರಸಿ: ಶಿರಸಿ ಹಾವೇರಿ ರಸ್ತೆ ದುರಸ್ತಿಗಾಗಿ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆದರೆ ಜಿಲ್ಲಾಧಿಕಾರಿ ರಸ್ತೆ ಕಾಮಗಾರಿ ಅತೀ ಶೀಘ್ರದಲ್ಲಿ ಆರಂಭವಾಗುವ ಬಗ್ಗೆ ಭರವಸೆ ನೀಡಿದ್ದರಿಂದ ಪ್ರತಿಭಟನೆಕ್ಕೆ ಬಿಟ್ಟಿದ್ದೇವೆ ಎಂದು ಉತ್ತರ ಕನ್ನಡ ಜಿಲ್ಲಾ ಆಟೋ ಚಾಲಕ, ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಒಂದು ವೇಳೆ ಕಾಮಗಾರಿ ನಡೆಯದಿದ್ದರೆ ಮೇ 19ರಂದು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಗಾಂಜಾ ಸೇವನೆ: ಓರ್ವ ಪೊಲೀಸರ ವಶಕ್ಕೆ

ಶಿರಸಿ: ಮಾದಕ ವಸ್ತು ಗಾಂಜಾ ಸೇವನೆ ಮಾಡಿದ ಆರೋಪದ ಮೇಲೆ ಪೊಲೀಸರು ಓರ್ವನನ್ನು ವಶಪಡಿಸಿಕೊಂಡು ಆತನ ಮೇಲೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪೈಜಾನ್ ಅಬ್ದುಲ್ ಸಮ್ಮದ್ ಮುಲ್ಲಾ ಈತ ನಗರದ ಕ್ಯಾಪ್ಟನ್ ಕ್ಯಾಂಪಸ್ ಹೋಗುವ ಕಚ್ಚಾ ರಸ್ತೆಯಲ್ಲಿ ಗಾಂಜಾ ಸೇವನೆ ಮಾಡಿರುವ ಹಿನ್ನೆಲೆ ಪೊಲೀಸರು ವಶಕ್ಕೆ ಪಡೆದು ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ.

ಪ್ರಧಾನಿ ಕರೆಗೆ ಸಂಸದ ಕಾಗೇರಿ ಬೆಂಬಲ

ದೇಶದ ಹಿತಕ್ಕಾಗಿ ಈ ದೂರದರ್ಶಿತ್ವದ ಕರೆಯನ್ನು ಪ್ರತಿಯೊಬ್ಬ ನಾಗರಿಕನೂ ಪಾಲಿಸಬೇಕು

• **ಕನ್ನಡಪ್ರಭ ವಾರ್ತೆ** ಕಾರವಾರ

ದೇಶದ ಹಿತದೃಷ್ಟಿಯಿಂದ ಒಂದು ವರ್ಷದ ಕಾಲ ಬಂಗಾರ ಖರೀದಿಸಬೇಡಿ ಹಾಗೂ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲವನ್ನು ಮಿತವಾಗಿ ಬಳಸಿ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸ್ವಾಗತಿಸಿ ಬೆಂಬಲಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿಯವರ ಈ ದೂರದರ್ಶಿತ್ವದ ಕರೆಯನ್ನು ಪ್ರತಿಯೊಬ್ಬ ನಾಗರಿಕನೂ ಪಾಲಿಸಬೇಕು ಎಂದು ಮನವಿ ಮಾಡಿದರು.

ನಾವು ಗ್ಯಾಸ್, ಕಚ್ಚಾ ತೈಲ ಹಾಗೂ ರಸಗೊಬ್ಬರಗಳಿಗಾಗಿ ವಿದೇಶಗಳ ಮೇಲೆ ಅತಿಯಾಗಿ ಅವಲಂಬಿತರಾಗಿದ್ದೇವೆ. ಈ ಅವಲಂಬನೆಯನ್ನು ಕಡಿಮೆ ಮಾಡುವುದು ಇಂದಿನ ತುರ್ತು ಅಗತ್ಯವಾಗಿದೆ. ಭಾರತವನ್ನು ಸ್ವಾವಲಂಬಿಯನ್ನಾಗಿಸುವ ಉದ್ದೇಶದಿಂದಲೇ ಮೋದಿ ಅವರು ಇಂತಹ ಕಠಿಣ ಆದರೆ ಅಗತ್ಯವಾದ ಮನವಿಯನ್ನು ಜನರ ಮುಂದೆ ಇಟ್ಟಿದ್ದಾರೆ. ದೇಶದ ಹಿತಕ್ಕಾಗಿ ಜನರು ಈ ಕರೆಗೆ ಸ್ಪಂದಿಸಬೇಕು ಎಂದು ಕಾಗೇರಿ ಮನವಿ ಮಾಡಿದರು.

ಇಸ್ರೇಲ್-ಇರಾನ್ ಯುದ್ಧ, ರಷ್ಯಾ-ಉಕ್ರೇನ್ ಬಿಕ್ಕಟ್ಟು ಹಾಗೂ ಚೀನಾದ ಚಟುವಟಿಕೆಗಳಿಂದಾಗಿ ಜಾಗತಿಕ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಇಂತಹ ಸಂದರ್ಭದಲ್ಲಿ ಹಲವು ದೇಶಗಳು ಆರ್ಥಿಕ ಕುಸಿತ ಮತ್ತು ಲಾಕ್‌ಡೌನ್‌ನಂತಹ ಸ್ಥಿತಿಯನ್ನು ಎದುರಿಸುತ್ತಿವೆ. ಆದರೆ, ನರೇಂದ್ರ ಮೋದಿಯವರ ಸಮರ್ಥ ನಾಯಕತ್ವದಿಂದಾಗಿ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಪೂರೈಕೆ ನಿರಂತರವಾಗಿ ನಡೆಯುತ್ತಿದೆ. ವಾಣಿಜ್ಯ ಸಿಲಿಂಡರ್‌ದರ ಏರಿಕೆಯಾಗಿದ್ದರೂ, ಜನರಿಗೆ ತೊಂದರೆಯಾಗದಂತೆ ಕೇಂದ್ರ ಸರ್ಕಾರ ಪರಿಸ್ಥಿತಿಯನ್ನು ನಿಭಾಯಿಸುತ್ತಿದೆ ಎಂದು ಸಮರ್ಥಿಸಿಕೊಂಡರು.

ಕೊರೋನಾ ಕಾಲಘಟ್ಟವನ್ನು ಮೋದಿ ಅವರು ಹೇಗೆ ಯಶಸ್ವಿಯಾಗಿ ಎದುರಿಸಿದ್ದಾರೆ ಎಂಬುದು ನಮ್ಮ ಕಣ್ಣಮುಂದಿದೆ. ಇಂದು ಇಡೀ ಜಗತ್ತು ಸವಾಲಿನ ಸಂದರ್ಭದಲ್ಲಿದೆ ಮತ್ತು ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಆದರೂ ಭಾರತೀಯರು ನೆಮ್ಮದಿಯಿಂದ ಬದುಕುತ್ತಿದ್ದಾರೆಂದರೆ ಅದಕ್ಕೆ ಕೇಂದ್ರ ಸರ್ಕಾರದ ಜನಪರ ನೀತಿಗಳೇ ಕಾರಣ. ಮುಂದೆ ಬರಬಹುದಾದ ದೊಡ್ಡ ಆರ್ಥಿಕ ಸಮಸ್ಯೆಗಳನ್ನು ತಡೆಯಲು ಈಗಿನಿಂದಲೇ ಇಂಧನ ಹಾಗೂ ಸಂಪನ್ಮೂಲಗಳ ಮಿತ ಬಳಕೆ ಮಾಡುವುದು ಅನಿವಾರ್ಯ ಎಂದರು.

> ■ ಕೊರೋನಾ ಕಾಲಘಟ್ಟವನ್ನು ಮೋದಿ ಅವರು ಹೇಗೆ ಯಶಸ್ವಿಯಾಗಿ ಎದುರಿಸಿದ್ದಾರೆ ಎಂಬುದು ನಮ್ಮ ಕಣ್ಣಮುಂದಿದೆ.
> ■ ಇಂದು ಇಡೀ ಜಗತ್ತು ಸವಾಲಿನ ಸಂದರ್ಭದಲ್ಲಿದೆ ಮತ್ತು ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಆದರೂ ಭಾರತೀಯರು ನೆಮ್ಮದಿಯಿಂದ ಬದುಕುತ್ತಿದ್ದಾರೆಂದರೆ ಅದಕ್ಕೆ ಕೇಂದ್ರ ಸರ್ಕಾರದ ಜನಪರ ನೀತಿಗಳೇ ಕಾರಣ.

ವಿದೇಶಿ ವಿನಿಮಯದ ಉಳಿತಾಯ ಮತ್ತು ದೇಶದ ಆರ್ಥಿಕ ಭದ್ರತೆಯ ದೃಷ್ಟಿಯಿಂದ ಪ್ರಧಾನಿಯವರ ಈ ಸಂದೇಶವನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕು ಎಂದು ಅವರು ಜಿಲ್ಲೆಯ ಜನತೆಯಲ್ಲಿ ವಿನಂತಿಸಿದರು.

ಪೊಲೀಸ್ ದರ್ಪಕ್ಕೆ ಕಡಿವಾಣ ಹಾಕುವಂತೆ ಅಕ್ಷಯ ಒತ್ತಾಯ

• **ಕನ್ನಡಪ್ರಭ ವಾರ್ತೆ** ಕುಮಟಾ

ಕುಮಟಾ ಪೊಲೀಸ್ ಠಾಣೆಯ ಪಿಎಸ್‌ಐ ಖಾದರ ಭಾಷಾ ವಾಹನ ತಪಾಸಣೆ ವೇಳೆ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಪೊಲೀಸ್ ದರ್ಪ ಮೆರೆದಿದ್ದಾರೆ. ಹೀಗಾಗಿ ಪಿಎಸ್‌ಐ ವಿರುದ್ಧ ಇಲಾಖೆಯ ಮೇಲಧಿಕಾರಿಗಳಿಗೆ ದೂರು ನೀಡಿದ್ದಕ್ಕೆ ಇನ್ನೂ ತನಕ ಸಮರ್ಪಕ ಉತ್ತರವಾಗಲಿ, ಕ್ರಮವಾಗಲಿ ಆಗಿಲ್ಲ ಎಂದು ಹೆಗಡೆ ಗ್ರಾಮದ ನಿವಾಸಿ ಅಕ್ಷಯ ನಾಯ್ಕ ತಿಳಿಸಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ, ಸ್ನೇಹಿತ ವಿನೋದ ಎಂಬಾತನೊಂದಿಗೆ ಕೆಲದಿನಗಳ ಹಿಂದೆ ಹೆಗಡೆಯಿಂದ ಧಾರೇಶ್ವರಕ್ಕೆ ನಾನು ತೆರಳುತ್ತಿದ್ದಾಗ ಕುಮಟಾ ಮುಖ್ಯ ಬಸ್ ನಿಲ್ದಾಣದ ಎದುರಿನರೈಲ್ವೆಸೇತುವೆ ಬಳಿ ನಡುರಸ್ತೆಯಲ್ಲಿ ನಮ್ಮನ್ನು ಪಿಎಸ್‌ಐ ಹಾಗೂ ಸಿಬ್ಬಂದಿ ತಡೆದಿದ್ದಾರೆ. ಬೈಕ್‌ನ ಕೀ ಹಾಗೂ ನನ್ನ ಮೊಬೈಲ್ ಕಿತ್ತುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಸಾರ್ವಜನಿಕರೆದುರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಳಿಕ ಒಟ್ಟೂ ₹3000 ದಂಡ ಹಾಕಿದ್ದಾರೆ. ದಂಡ ಹಾಕಿದ್ದಕ್ಕೆ ನಮ್ಮ ಆಕ್ಷೇಪವಿಲ್ಲ ಆದರೆ ಅವರ ದರ್ಪದ ವರ್ತನೆ ಮತ್ತು ಪಾಲಿಸಬೇಕಾದ ಪಾರದರ್ಶಕತೆಯ ಲೋಪಕ್ಕೆ ಆಕ್ಷೇಪವಿದೆ ಎಂದರು.

ಈ ಬಗ್ಗೆ ಅದೇ ದಿನ ಜಿಲ್ಲಾ ಪೊಲೀಸ್ ವರಿಷ್ಠರಿಗೆ ವಾಟ್ಸ್‌ಆ್ಯಪ್ ಮೂಲಕ ದೂರು ಸಲ್ಲಿಸಿದ್ದೆ. ಬಳಿಕ ಸಿಪಿಐ ಅವರ ಕರೆಯ ಮೇರೆಗೆ ಠಾಣೆಗೆ ಹೋಗಿ ನಡೆದ ಸಂಗತಿ ವಿವರಿಸಿದ್ದೇನೆ. ಬಳಿಕ ನನಗೆ ಯಾವುದೇ ಉತ್ತರ ಬಂದಿಲ್ಲ ಎಂದು ವಿವರಿಸಿದರು.

ಸಾಮಾಜಿಕಕಾರ್ಯಕರ್ತ ಮಂಜುನಾಥ ಎಲ್.ನಾಯ್ಕ ಮಾತನಾಡಿ, ತಪ್ಪು ಮಾಡಿದವರಿಗೆ ಕಾನೂನಿನ ಭಯ ಹುಟ್ಟಿಸಬೇಕಾದ್ದು ಪೊಲೀಸರ ಕರ್ತವ್ಯ. ಆದರೆ ಪೊಲೀಸರು ಸಾರ್ವಜನಿಕರೊಂದಿಗೆ ಹೇಗೆ ವರ್ತಿಸಬೇಕೆಂಬುದಕ್ಕೂ ನಿಯಮಗಳಿವೆ. ಜನರೊಂದಿಗೆ ವ್ಯವಹರಿಸುವಾಗ ಪಾರದರ್ಶಕತೆಇರಬೇಕೆಂಬ ಉದ್ದೇಶದಿಂದ ಪಿಎಸ್‌ಐಗಳಿಗೆ ತಪಾಸಣೆ ವೇಳೆ ಕಡ್ಡಾಯವಾಗಿ ಬಾಡಿ ಕ್ಯಾಮೆರಾ ಅಳವಡಿಕೆಗೆ ನಿರ್ದೇಶಿಸಲಾಗಿದೆ. ಎಲ್ಲೆಡೆ ಬಾಡಿ ಕ್ಯಾಮೆರಾ ವಿತರಿಸಿದ ಬಗ್ಗೆ ಡಿವೈಎಸ್‌ಪಿ ತಿಳಿಸಿದ್ದಾರೆ. ಹಲವಾರು ಆಧುನಿಕ ತಂತ್ರಜ್ಞಾನ ಬಳಕೆಯಲ್ಲಿರುವಾಗ ಬಾಡಿಕ್ಯಾಮೆರಾವನ್ನೂ ಬಳಸದೇ ಸಾರ್ವಜನಿಕರ ಮೇಲೆ ದರ್ಪ ತೋರುವುದು, ನಿಂದಿಸುವುದು ಸರಿಯಲ್ಲ. ರಸ್ತೆ, ವೃತ್ತ ಎಲ್ಲೆಡೆ ಸಿಸಿ ಕ್ಯಾಮೆರಾಗಳ ಅಳವಡಿಕೆ ಇರುವಾಗಲೂ, ಅತಿಯಾದ ವಾಹನ ದಟ್ಟಣೆ, ಇಕ್ಕಟ್ಟು ಇರುವಲ್ಲಿ ಪೊಲೀಸರು ನಿಂತು ವಾಹನಗಳನ್ನು ಅಡ್ಡಗಟ್ಟಿ ದಂಡ ವಸೂಲಿ ಅನಿವಾರ್ಯವೇ ಎಂದು ಪ್ರಶ್ನಿಸಿದರು. ಅಕ್ಷಯ ನಾಯ್ಕ ಅವರ ಪರವಾಗಿ ಹೋರಾಟಕ್ಕೆಸಿದ್ದರಾಗಿದ್ದು ಪೊಲೀಸ್ ಮೇಲಧಿಕಾರಿಗಳೊಂದಿಗೂ ಪರಾಮರ್ಶಿಸಿದ್ದೇನೆ. ಇಲಾಖೆಯಿಂದ ಸಮರ್ಪಕ ಉತ್ತರ ಹಾಗೂ ಸೂಕ್ತ ಕ್ರಮವಾಗದಿದ್ದರೆ ಯಾವುದೇ ಹೋರಾಟಕ್ಕೂ ಸಿದ್ಧರಿದ್ದೇವೆ ಎಂದರು.

ಪುರಸಭೆ ಮಾಜಿ ಸದಸ್ಯ ಹರೀಶ ಶೇಟ ಮಾತನಾಡಿ, ಪಿಎಸ್‌ಐ ಖಾದರ ಭಾಷಾ ಅವರು ಹಿಂದೆಗೋಕರ್ಣ ಮಹಾಬಲೇಶ್ವರ ಮಂದಿರದಲ್ಲಿ ಬಂದೋಬಸ್ತ್‌ನಲ್ಲಿದ್ದಾಗ ಅವರದೇ ಇಲಾಖೆಯ ಸಿಬ್ಬಂದಿಯೊಟ್ಟಿಗೆ ನಡೆದುಕೊಂಡ ರೀತಿಯನ್ನು ಎಲ್ಲರೂ ನೋಡಿದ್ದಾರೆ. ಅಂಥ ವರ್ತನೆ ಇಲ್ಲಿ ನಡೆಯದು. ಅಧಿಕಾರಿಗಳಿಂದ ಸಮಾಜದ ಸಾಮರಸ್ಯ ಹಾಳಾಗಬಾರದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂದೇಶ ಶೆಟ್ಟಿ, ಗಜಾನನ ನಾಯ್ಕ ಅಳ್ಳೆಕೋಡಿ, ಸುರೇಶ ಹರಿಕಾಂತ, ಈಶ್ವರ ಮುಕ್ರಿ, ಗೋಪಾಲ ನಾಯ್ಕ ಇತರರಿದ್ದರು.

ನಿವೃತ್ತ ಕೆಎಎಸ್ ಅಧಿಕಾರಿಯ ಆತ್ಮಕಥೆ ಲೋಕಾರ್ಪಣೆ

• **ಕನ್ನಡಪ್ರಭ ವಾರ್ತೆ** ಕಾರವಾರ

ನಿವೃತ್ತ ಕೆಎಎಸ್ ಅಧಿಕಾರಿ, ಮಾಜಿ ಯೋಧ, ಕಾರವಾರದ ವೈ.ಜಿ. ಸದಾಶಿವ ಅವರ ವೃತ್ತಿ ಮತ್ತು ವೈಯಕ್ತಿಕ ಬದುಕಿನ ರೋಚಕ ಹೆಜ್ಜೆಗುರುತುಗಳನ್ನು ದಾಖಲಿಸಿರುವ 'ಯುದ್ಧದಿಂದ ಸೇವೆಗೆ...' ಆತ್ಮಕಥೆ ನಿನ್ನೆ ಬೆಂಗಳೂರಿನ ಹಯ್ಯಾಟ್ ಸೆಂಟ್ರಿಕ್ ಹೋಟೆಲ್‌ನಲ್ಲಿ ಲೋಕಾರ್ಪಣೆಗೊಂಡಿತು.

ಬೆಂಗಳೂರಿನ ಹಯ್ಯಾಟ್ ಸೆಂಟ್ರಿಕ್ ಹೋಟೆಲ್‌ನಲ್ಲಿ ಕೃತಿ ಲೋಕಾರ್ಪಣೆಗೊಂಡಿತು.

ಕೃತಿಯ ಕುರಿತು ಮಾತನಾಡಿದ ವೈ. ಸದಾಶಿವ, ನನ್ನ 80 ವರ್ಷಗಳ ಬದುಕಿನಲ್ಲಿ ಹಿಂತಿರುಗಿ ನೋಡಿದಾಗ ಎಷ್ಟೊಂದು ತಿರುವುಗಳು ಎದುರಾಗಿವೆ ಎಂಬುದು ಅಚ್ಚರಿ ಮೂಡಿಸುತ್ತದೆ. ಸುಮ್ಮನಿರಬೇಕೆಂದರೂ ಬಿಡದ ದಿನಗಳು ಮತ್ತು ಜವಾಬ್ದಾರಿಗಳು ನನ್ನನ್ನು ಸದಾ ಕಾರ್ಯೋನ್ಮುಖನನ್ನಾಗಿಸಿವೆ. ಊಟಿಯ ಬೆಟ್ಟಗುಡ್ಡಗಳಿಂದ ಹಿಡಿದು, ಸಿಯಾಚಿನ್‌ನ ಹಿಮಪರ್ವತಗಳು, ಯುದ್ಧಭೂಮಿ ಹಾಗೂ ಆಡಳಿತಾತ್ಮಕ ಹುದ್ದೆಗಳವರೆಗೆ ನಾನು ಸವೆಸಿದ ಹಾದಿ, ನನ್ನನ್ನು ರೂಪಿಸಿದ ಕ್ಷಣಗಳಿಗೆ ಕೊಡುವ ಗೌರವವಾಗಿ ಈ ಆತ್ಮಕಥೆಯನ್ನು ರಚಿಸಿದ್ದೇನೆ ಎಂದರು.

ಪುಸ್ತಕದ ನಿರೂಪಕ ಹಾಗೂ ಪತ್ರಕರ್ತ ನಾಗರಾಜ ವೈದ್ಯ, ಬದುಕಿನ ಎಲ್ಲ ದಾರಿಗಳು ಮುಚ್ಚಿ ಹೋಗಿ, ಇನ್ನೇನೂ ಸಾಧ್ಯವೇ ಇಲ್ಲ ಎಂದು ಸೋತು ಕೂತಾಗಲೂ, ಕೈ ಹಿಡಿದು ನಡೆಸುವ, ಜೀವನೋತ್ಸಾಹವನ್ನು ನೀಡುವ ಕೃತಿ ಇದು ಎಂದರು.

ನೀಟ್‌ರೀಚೇಬಲ್ ಕ್ರಿಯೇಟಿವ್ ಸೊಲ್ಯೂಷನ್ಸ್ ಪ್ರಕಟಿಸಿರುವ ಈ ಕೃತಿಯು ಕೇವಲ ಒಬ್ಬ ವ್ಯಕ್ತಿಯ ಕಥೆಯಲ್ಲ; ಬದಲಾಗಿ ಊಟಿಯ ಚಹಾ ಎಸ್ಟೇಟ್‌ನಿಂದ ಆರಂಭವಾಗಿ, ದೇಶ ಕಾಯುವ ಯುದ್ಧಭೂಮಿಯ ಸವಾಲುಗಳನ್ನು ದಾಟಿ, ತದನಂತರ ನಾಗರಿಕ ಆಡಳಿತದ ಆಯಕಟ್ಟಿನ ಹುದ್ದೆಗಳನ್ನು ನಿಭಾಯಿಸಿದ ಹೋರಾಟಗಾರನೊಬ್ಬನ ಜೀವನ ದರ್ಶನವಾಗಿದೆ. ಸೇನೆಯ ಶಿಸ್ತು ಹಾಗೂ ಆಡಳಿತಾತ್ಮಕ ಬಿಕ್ಕಟ್ಟುಗಳನ್ನು ಒಬ್ಬ ವ್ಯಕ್ತಿ ಹೇಗೆ ಎದುರಿಸಿದ ಎಂಬುದನ್ನು ಈ ಪುಸ್ತಕ ಕಟ್ಟಿಕೊಡುತ್ತದೆ.

ಲೇಖಕರ ಪತ್ನಿ ಶಿವಮ್ಮ ಸದಾಶಿವ, ಸಂಬಂಧಿಗಳಾದ ವೈ. ವಿಜಯಕುಮಾರ್, ವೈ. ಲಲಿತಾಕುಮಾರಿ, ವೈ. ಸುಗುಣಾ ಹಾಗೂ ವೈ. ಮುರಳಿಮೋಹನ್ ಹಾಗೂ ವೈ. ಸದಾಶಿವ ಅವರ ನೂರಾರು ಜನ ಅಭಿಮಾನಿಗಳು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ರಾಣೆಬೆನ್ನೂರು: ಸ್ಥಳೀಯ ಲಿಂಗಾಯತ ಸಮಾಜದ ನಿವೃತ್ತ ನೌಕರರ ಸಂಘದ ವತಿಯಿಂದ ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ತಾಲೂಕಿನ ಯಾವುದಾದರೂ ಒಂದು ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಓದಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಯನ್ನು ಬರೆದಿರಬೇಕು, ಕನಿಷ್ಠ ಶೇ. 90 ಅಂಕ ಪಡೆದಿರಬೇಕು ಹಾಗೂ ಲಿಂಗಾಯತ ಸಮಾಜದವರಾಗಿರಬೇಕು. ಅರ್ಹ ವಿದ್ಯಾರ್ಥಿಗಳು ಅರ್ಜಿಯೊಂದಿಗೆ ಶಾಲೆಬಿಟ್ಟ ಪ್ರಮಾಣ ಪತ್ರದ ನಕಲು ಪ್ರತಿ (ಟಿಸಿ), ಎಸ್ಸೆಸ್ಸೆಲ್ಸಿ ಅಂಕ ಪ್ರತಿ (ಮುಖ್ಯೋಪಾಧ್ಯಾಯರ ದೃಢೀಕರಣ ಹೊಂದಿದೆ). ಈ ದಾಖಲಾತಿಗಳ ಸಮೇತ 9964030664, 9620266727, 9449983689 ಸಂಪರ್ಕಿಸಿ ಮೇ 28ರ ಒಳಗಾಗಿ ಅರ್ಜಿ ಕಲಿಸಬೇಕು. ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 125 ಅಂಕ ಪಡೆದ ಎಲ್ಲಾ ಲಿಂಗಾಯತ ಮಕ್ಕಳಿಗೂ ವಿಶೇಷ ಬಹುಮಾನ ಕೊಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನೊಳಂಬ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹಾವೇರಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡ ನೊಳಂಬ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೊಳಂಬ ಲಿಂಗಾಯತ ಸಂಘ, ಬೆಂಗಳೂರು ಮತ್ತು ಉಪಸಮಿತಿ ಹಾವೇರಿ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಪೋತ್ಸಾಹಿಸಲು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಹಾವೇರಿ, ಕಾರವಾರ, ದಾವಣಗೆರೆ ಹಾಗೂ ಧಾರವಾಡ ಜಿಲ್ಲೆಗಳ ನೊಳಂಬ ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು ತಮ್ಮ ಸ್ವ-ವಿವರ, ಫೋಟೋ, ಆಧಾರಕಾರ್ಡ, ಮೊಬೈಲ್ ನಂಬರ್‌ಹಾಗೂ ನಕಲು ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ಅಧ್ಯಕ್ಷರು, ನೊಳಂಬ ಲಿಂಗಾಯತ ಸಂಘ, ಉಪಸಮಿತಿ ಹಾವೇರಿ, ನಂದಿಪತ್ತಿನ ಸೌಹಾರ್ದ ಸಹಕಾರಿ ನಿಯಮಿತ (ಬ್ಯಾಂಕ್), ಕಲ್ಲುಮಂಟಪ ರಸ್ತೆ, ಹಾವೇರಿ ಇವರಿಗೆ ತಲುಪಿಸಬೇಕು. ಅರ್ಜಿ ಸಲ್ಲಿಕೆಗೆ ಮೇ 31 ಕೊನೆಯ ದಿನವಾಗಿದೆ. ಮುಂಬರುವ ಜೂ.7ರಂದು ಬೆಳಗ್ಗೆ 10ಕ್ಕೆ ನಗರದ ಆರ್‌ಟಿಒ ಕಚೇರಿ ಬಳಿ ಇರುವ ಗುರುಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 8050868273, 6360325047, 7892306785, 9448966100, 9008929426 ಇವರನ್ನು ಸಂಪರ್ಕಿಸಬಹುದು ಎಂದು ಅಧ್ಯಕ್